

# ನೀರಿನೊಳಗಿನ ಮಂಜು

■ ಡಾ.ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಇರುಳಿನಲ್ಲಿ ಹುಡುಕಿಕೊಂಡು ಬಂದ ಆಗಂತುಕರು

ಒಳ್ಳೆತನ ಸಹಜವೇನಲ್ಲ, ಅಸಹಜವೂ ಅಲ್ಲ
—ಗೋಪಾಲಕೃಷ್ಣ ಅಡಿಗ

1

'ಸರ್ ನಮಸ್ಕಾರ, ನಾನು ಮದನಮೋಹನ, ರಾಂಪುರದಿಂದ ಮಾತನಾಡುತ್ತಿದ್ದೇನೆ. ಫ್ರೀ ಇದ್ದೀರಾದರೆ ಮಾತು ಮುಂದುವರಿಸುತ್ತೇನೆ.'

ಆ ಫೋನು ಕರೆಗೆ ಶ್ರೀನಿವಾಸರಾಯರು 'ಎಸ್ ಪ್ಲೀಸ್' ಎಂದರು.

ಮದನಮೋಹನ ಹೇಳಿದ – 'ಸರ್ ಇಂದಿನ ದಿನವಾಣಿ ಪತ್ರಿಕೆಯ ರಾಜ್ಯವಾರ್ತಾ ವಿಭಾಗದಲ್ಲಿ ನೀವು ಎರಡು ದಿನದ ಹಿಂದೆ ಮಾಡಿದ ಭಾಷಣದ ವರದಿ ಬಂದಿದೆ ಸರ್, ಓದಿ ತುಂಬಾ ಖುಷಿಯಾಯಿತು.'

'ಹೌದಾ? ಏನು ಬಂದಿದೆ ವಾರ್ತೆ?' ಶ್ರೀನಿವಾಸರಾಯರು ಕುತೂಹಲದಲ್ಲಿ ಪ್ರಶ್ನಿಸಿದರು.

'ಸರ್, ದೇವರಿರುವುದು ನಮ್ಮ ಬಯಕೆಗಳನ್ನು ಪೂರೈಸಲಿಕ್ಕಲ್ಲ. ಅವನನ್ನು ನಾವು ಪ್ರೀತಿಸಬೇಕೆಂಬುದಕ್ಕೆ ಎಂದು ದೊಡ್ಡ ಶಿರೋನಾಮೆಯಲ್ಲಿ ಪ್ರಕಟವಾಗಿದೆ ಸರ್.'

'ವಂಡರ್‌ಫುಲ್! ನಾನು ಅದನ್ನು ರಾಜ್ಯವಾರ್ತೆಯಾಗುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಬೇರೆ ಕಡೆ ಹೇಳುವ ಹಾಗೆ ನಮ್ಮ ಸೀತಾಪುರದ ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ ಸಹಜವಾಗಿಯೇ ಆ ಮಾತನ್ನು ಆಡಿದ್ದೆ. ಅದಕ್ಕೆ ಸಭಾಸದರಿಂದ ಚಪ್ಪಾಳೆ ಕೂಡಾ ಬೀಳಲಿಲ್ಲ. ಆದರೆ ಅದು ಇಷ್ಟು ದೊಡ್ಡ ಸುದ್ದಿಯಾಗುತ್ತದೆ ಎಂದು ಊಹಿಸಿಯೇ ಇರಲಿಲ್ಲ' ಎಂದು ಶ್ರೀನಿವಾಸರಾಯರು ಹೇಳಿದರು.

'ಇಲ್ಲ ಸರ್. ನಿಮ್ಮ ಇಡೀ ಭಾಷಣದ ಸಾರಾಂಶ ತುಂಬ ಸೊಗಸಾಗಿ ಬಂದಿದೆ. ಅದನ್ನು ವಾಟ್ಸಾಪ್‌ನಲ್ಲಿ ಫೋಟೊ ತೆಗೆದು ಕಳುಹಿಸುತ್ತೇನೆ. ನಿಮಗೆ ಖುಷಿಯಾಗಬಹುದು.'

'ಆಫ್‌ಕೋರ್ಸ್. ಇರಲಿ ಬಿಡಿ. ಅಂದಹಾಗೆ ನೀವು ಯಾರು ಅಂತ ನನಗೆ ತಿಳಿಯಲಿಲ್ಲ.'

'ಸರ್, ನಾನು ನಿಮ್ಮ ಸ್ಟೂಡೆಂಟ್ ಸರ್. ನಿಮ್ಮ ಇಂಗ್ಲಿಷ್ ಪಾಠ ಅಂದರೆ ನನಗೆ ತುಂಬ ಇಷ್ಟ ಸರ್. ನೀವು ನಿವೃತ್ತರಾಗುವ ವರುಷ ನಾನು ಫೈನಲ್ ಬಿ.ಎ.ಯಲ್ಲಿದ್ದೆ. ಪರೀಕ್ಷೆಯಲ್ಲಿ ನಿಮ್ಮ ಸಬ್ಜೆಕ್ಟಿನಲ್ಲಿ ನನಗೆ ಡಿಸ್ಟಿಂಕ್ಷನ್ ಇತ್ತು ಸರ್, ಅದು ನಿಮ್ಮ ಆಶೀರ್ವಾದ.'

'ಹೌದಾ?' ಎಂದ ಶ್ರೀನಿವಾಸರಾಯರು, 'ನೀವೇನು ಮಾಡುತ್ತಿದ್ದೀರಿ ಈಗ? ಹೈಯರ್ ಸ್ಟಡೀಸ್ ಮಾಡುತ್ತಿದ್ದೀರಾ? ಅಥವಾ ಮುಗಿಯಿತಾ?' ಎನ್ನುವಷ್ಟರಲ್ಲಿ ಪೋಸ್ಟ್‌ಮ್ಯಾನ್ ಪ್ರತ್ಯಕ್ಷನಾಗಿ, 'ಸರ್, ಒಂದು ರಿಜಿಸ್ಟರ್ಡ್ ಪೋಸ್ಟ್ ಇದೆ. ಸಹಿ ಬೇಕಾಗಿತ್ತು' ಎಂದ.

ಶ್ರೀನಿವಾಸರಾಯರು 'ನೋಡಪ್ಪ ಮದನಮೋಹನ, ನಾನು ನಿನ್ನಲ್ಲಿ ಮತ್ತೆ ಮಾತನಾಡುತ್ತೇನೆ. ಈಗೊಂದು ರಿಜಿಸ್ಟರ್ಡ್ ಪೋಸ್ಟು ಬಂತು. ಅದು ಏನೆಂದು ನೋಡಬೇಕಾಗಿದೆ' ಎನ್ನುತ್ತಾ ಫೋನು ಕಟ್ ಮಾಡಿದರು. ಆ ಪತ್ರ ಯಾರಿಂದ ಬಂತು ಎಂದು ನೋಡಿದರೆ ಅದರಲ್ಲಿ ಜಯಂತಿ ಕುಲಕರ್ಣಿಯವರ ವಿಳಾಸ ಇತ್ತು.

ರಾಯರಿಗೆ ಆತಂಕ ಮತ್ತು ಕುತೂಹಲವಾಯಿತು. ಅವರು ಪತ್ರವನ್ನು ಕ್ಷಣಾರ್ಧದಲ್ಲಿ ಓದಿ ಮುಗಿಸಿದರು. ತಕ್ಷಣ ತನ್ನ ಪತ್ನಿ ಸರೋಜ 'ಅದು ಯಾರ ಪತ್ರ?' ಎಂದು ಕೇಳುತ್ತಾಳೋ? ಎಂಬ ಆತಂಕದಲ್ಲಿ ಮಡಚಿ ಕಿಸೆಯಲ್ಲಿಟ್ಟುಕೊಂಡರು. ಪತ್ರದ ಕವರನ್ನು ಚೂರು ಚೂರು ಮಾಡುತ್ತಾ ಮನಸ್ಸಿನೊಳಗೇ 'ಛೇ!' ಎಂದುಕೊಂಡರು.

ಜಯಂತಿ ಕುಲಕರ್ಣಿ ರಾಂಪುರದಲ್ಲಿ ಶ್ರೀನಿವಾಸರಾಯರು ಪ್ರಾಧ್ಯಾಪಕರಾಗಿದ್ದ ದಿನಗಳಲ್ಲಿ ಅವರ ಸಹೋದ್ಯೋಗಿಯಾಗಿದ್ದವರು. ಅಷ್ಟೇ ಆಗಿದ್ದರೆ ರಾಯರ ವೃತ್ತಿ ಜೀವನದಲ್ಲಿ ಬಂದ ಹತ್ತಾರು ಜನ ಸಹೋದ್ಯೋಗಿಗಳ ಹಾಗೆ ಅವರೂ ಅವರ ನೆನಪಿನಲ್ಲಿ ಉಳಿಯದೆ ಮರೆಯಾಗುತ್ತಿದ್ದರು. ಆದರೆ ಜಯಂತಿ ಕುಲಕರ್ಣಿ ಹಾಗಲ್ಲ. ಅವರ ಬಗ್ಗೆ ರಾಯರಲ್ಲಿ ವಿಶಿಷ್ಟವಾದ ಒಂದು ಪ್ರೀತಿ ಇತ್ತು. ಆ ಪ್ರೀತಿ ಭೌತಿಕದ್ದೋ ಅಥವಾ ಅದರಾಚೆಯದ್ದೋ ಎಂದು ಅವರು ಒಮ್ಮೆಯೂ ಯೋಚಿಸಿದ್ದಿಲ್ಲ. ಆದರೆ ಅದು ಅವರೊಳಗೆ ಸದಾ ಇದ್ದು, ಜಯಂತಿ ಕುಲಕರ್ಣಿ ಅಂದಕೂಡಲೇ, ಏನೋ ಒಂದು ವಿವರಿಸಲಾಗದ